# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ವಿ.ಅನಂತ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಆನೇಕಲ್, ಬೆಂಗಳೂರು ನಗರ ಜಿಲ್ಲೆ ಮತ್ತು ಶ್ರೀಮತಿ ಎನ್.ಯು ಪಾರ್ವತಿ, ಹಿಂದಿನ ಕಾರ್ಯದರ್ಶಿ, ನೆರಿಗಾ ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ-ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು ಇವರಿಗೆ ವಹಿಸುವ ಬಗ್ಗೆ-ಆದೇಶ.

**ಓದಲಾಗಿದೆ:-**
1. ಮಾನ್ಯ ಉಪ ಲೋಕಾಯುಕ್ತ ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿ ಸಲ್ಲಿಸಿರುವ ವರದಿ ದಿ: 09-09-2015.
2. ಪ್ರಭಾರ ಉಪ ನಿಬಂಧಕರು, ವಿಚಾರಣೆಗಳು-2 ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೆಂಟ್/ ಉಪಲೋಕ್/ಬಿಡಿ-606/ 2007/ಡಿಆರ್‌ಇ-2 ದಿನಾಂಕ: 10-09-2015.

------

**ಪ್ರಸ್ತಾವನೆ:**

ಪ್ರಭಾರ ಉಪ ನಿಬಂಧಕರು, ವಿಚಾರಣೆಗಳು-2 ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದ ಜೊತೆಗೆ ಮಾನ್ಯ ಉಪ ಲೋಕಾಯುಕ್ತ ಇವರ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತರು ಇವರ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಸರ್ಕಾರದ ನಿರ್ಣಯವನ್ನು ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಶ್ರೀ ಅಶ್ವಥಪ್ಪ, ಬಿನ್, ಲೇಟ್ ಮುನಿಶಾಮಪ್ಪ, ಸಂಪಂಗಿರಾಮನಗರ, ಬನ್ನೆರುಘಟ್ಟ, ಬೆಂಗಳೂರು, ಇವರು ಶ್ರೀ ವಿ.ಅನಂತ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಆನೇಕಲ್, (ಪ್ರಸ್ತುತ ಉಪ ಆಯುಕ್ತರು ತುಮಕೂರು ಮಹಾನಗರ ಪಾಲಿಕೆ,) ಮತ್ತು ಶ್ರೀಮತಿ ಎನ್.ಯು ಪಾರ್ವತಿ, ಹಿಂದಿನ ಕಾರ್ಯದರ್ಶಿ, ನೆರಿಗಾ ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಪ್ರಸ್ತುತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕರ್ಪೂರ ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು.) ಇವರುಗಳು ಆನೇಕಲ್ ತಾಲ್ಲೂಕು ನೆರಿಗಾ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ತಿಪ್ಪಸಂದ್ರ ಗ್ರಾಮದ ಖಾನೇಷುಮಾರಿ ಸಂಖ್ಯೆ: 14ರ ಸ್ವತ್ತಿನಲ್ಲಿ ನಕಲಿ ದಾಖಲೆ ಸೃಷ್ಟಿ ಮಾಡಿ, ಆಶ್ರಯ ಯೋಜನೆಯಲ್ಲಿ ಮನೆ ಮಂಜೂರು ಮಾಡಿ ಕರ್ತವ್ಯ ಲೋಪ ಎಸಗಿರುತ್ತಾರೆಂದು ದೂರನ್ನು ಸಲ್ಲಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ, ಲೋಕಾಯುಕ್ತ ಕಚೇರಿಯು ತನಿಖೆಯನ್ನು ನಡೆಸಿ ಸಲ್ಲಿಸಿದ ವರದಿಯ ಅನುಸಾರ ಈ ಕೆಳಕಂಡ ಲೋಪಗಳಾಗಿರುವುದು ಕಂಡು ಬಂದಿರುತ್ತದೆ:-

1. ನೆರಿಗಾ ಗ್ರಾಮ ಪಂಚಾಯತಿ ವ್ಯಾಪ್ತಿಯ ತಿಪ್ಪಸಂದ್ರ ಗ್ರಾಮದ ಖಾನೇಷುಮಾರಿ ನಂ.14ರ ಸ್ವತ್ತು ಮೃತ ಶ್ರೀಮುನಿಶಾಮಿ ಎಂಬುವವರಿಗೆ ಸೇರಿದ್ದು, ಸದರಿಯವರಿಗೆ ಇದ್ದ 5 ಜನ ಗಂಡುಮಕ್ಕಳ

ಪೈಕಿ 3 ಜನ ಗಂಡು ಮಕ್ಕಳು ಈಗಾಗಲೇ ಮರಣ ಹೊಂದಿದ್ದು, ಸದರಿ ಆಸ್ತಿಯು ಭಾಗವಾಗದೆ ಇದ್ದರೂ ಸಹ ಗ್ರಾಮ ಪಂಚಾಯತಿ ವತಿಯಿಂದ ಶ್ರೀಮತಿ ಅಮ್ಮಯಮ್ಮ ಕೊಂ. ಜಗನ್ನಾಥ, ಎಂಬುವವರಿಗೆ ರಾಜೀವ್‌ಗಾಂಧಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರು ಮಾಡಿ ಮನೆ ನಿರ್ಮಾಣ ಮಾಡಲಿಕ್ಕೆ 20 ಸಾವಿರ ರೂ.ಗಳ ಧನಸಹಾಯ ಮಾಡಿ ನಾಲ್ಕು ಹಂತಗಳಲ್ಲಿ ಮನೆ ಪೂರ್ಣಗೊಂಡ ನಂತರ 19.500/–ಗಳ ವೆಚ್ಚ ಭರಿಸಿರುವುದು ಸದರಿ ಯೋಜನೆಯ ಮಾರ್ಗಸೂಚಿಗಳ ಉಲ್ಲಂಘನೆಯಾಗಿರುತ್ತದೆ.

2. ಶ್ರೀ ಅಮ್ಮಯಮ್ಮ ಕೋಂ. ಜಗನ್ನಾಥ್, ರವರು ಖಾನೇಸುಮಾರಿ ಸಂಖ್ಯೆ: 14 ರ ನಿವೇಶನ ಮತ್ತು ಹಕ್ಕು ಪತ್ರ ಹೊಂದಿಲ್ಲದಿದ್ದರೂ ಸಹ, ಸದರಿ ನಿವೇಶನ ಹೊಂದಿರುವುದಾಗಿ ದಾಖಲೆ ಸೃಷ್ಟಿಸಿ, ಸದರಿಯವರಿಗೆ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರು ಮಾಡಲು ತಾಲ್ಲೂಕು ಪಂಚಾಯತಿಗೆ ಪ್ರಸ್ತಾವನೆ ಸಲ್ಲಿಸಿರುವುದು ಸದರಿ ಯೋಜನೆ ಮಾರ್ಗಸೂಚನೆಯ ಉಲ್ಲಂಘನೆಯಾಗಿರುತ್ತದೆ.

3. ನೆರಿಗಾ ಗ್ರಾಮ ಪಂಚಾಯತಿ ಕಾರ್ಯದರ್ಶಿರವರು ಸಲ್ಲಿಸಿದ್ದ ಪ್ರಸ್ತಾವನೆಯ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲನೆ ಮಾಡದೆ ಸರ್ಜಾಪುರ ಗ್ರಾಮದ ಶ್ರೀಮತಿ ವೇಂಡಮ್ಮ ಕೋಂ, ಮುನಿಯಪ್ಪ, ಇವರಿಗೆ ಮಂಜೂರಾದ ಆಶ್ರಯ ಮನೆಯನ್ನು ಬದಲಾವಣೆ ಮಾಡಿ ಶ್ರೀ ಅಮ್ಮಯಮ್ಮ, ರವರಿಗೆ ಮನೆ ಮಂಜೂರು ಮಾಡಲಾಗಿದೆ.

ಮೇಲಿನ ಕರ್ತವ್ಯಲೋಪ ಮತ್ತು ದಾಖಲೆಗಳ ಸೃಜನೆಗೆ ಶ್ರೀಮತಿ ಎನ್.ಯು ಪಾರ್ವತಿ ಹಿಂದಿನ ಕಾರ್ಯದರ್ಶಿ, ನೆರಿಗಾ ಗ್ರಾಮ ಪಂಚಾಯತಿ, (ಪ್ರಸ್ತುತ ಪಂಚಾಯತ್ ಅಭಿವೃದ್ಧಿ ಅಧಿಕಾರಿ) ಹಾಗೂ ಶ್ರೀ ವಿ.ಅನಂತ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಆನೇಕಲ್, ಇವರುಗಳು ಕಾರಣರಾಗಿದ್ದು, ತನಿಖಾ ವರದಿಗೆ ಪ್ರತಿಯಾಗಿ ಸದರಿಯವರುಗಳು ಸಲ್ಲಿಸಿದ ಆಕ್ಷೇಪಣಾ ಹೇಳಿಕೆಗಳಲ್ಲಿ ಯಾವುದೇ ಪರಿಗಣನಾರ್ಹವಾದ ಅಂಶಗಳು ಕಂಡು ಬಂದಿರುವುದಿಲ್ಲ. ಈ ಇಬ್ಬರು ನೌಕರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ನಿಷ್ಠೆಯನ್ನು ತೋರದೆ ಲೋಪವೆಸಗಿ ದುರ್ವರ್ತನೆಯಿಂದ ವರ್ತಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದೆ ರೀತಿಯಲ್ಲಿ ನಡೆದುಕೊಂಡಿರುವುದು ಕಂಡು ಬಂದಿರುವುದರಿಂದ ಹಾಗೂ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)(i)(ii) ಹಾಗೂ (iii)ನ್ನು ಉಲ್ಲಂಘಿಸಿರುವುದರಿಂದ ಸದರಿಯವರುಗಳ ವಿರುದ್ಧದ ಕರ್ತವ್ಯಲೋಪ ಮತ್ತು ದುರ್ವರ್ತನೆ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವುದು ಅವಶ್ಯವೆಂದು ಕಂಡು ಬಂದಿರುತ್ತದೆ.

ಆದ್ದರಿಂದ ಶ್ರೀಮತಿ ಎನ್.ಯು ಪಾರ್ವತಿ ಹಿಂದಿನ ಕಾರ್ಯದರ್ಶಿ, ನೆರಿಗಾ ಗ್ರಾಮ ಪಂಚಾಯತಿ, (ಪ್ರಸ್ತುತ ಪಂಚಾಯತ್ ಅಭಿವೃದ್ಧಿ ಅಧಿಕಾರಿ) ಹಾಗೂ ಶ್ರೀ ವಿ.ಅನಂತ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಆನೇಕಲ್, ಇವರುಗಳು ವಿರುದ್ದದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 244 ವಿಸೇಬಿ 2015 ಬೆಂಗಳೂರು ದಿನಾಂಕ :28-09-2015</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪದ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11 ರಂತೆ ನಡೆಸುವ ಸಲುವಾಗಿ, ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ) ರಂತೆ ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರಿಗೆ ವಹಿಸಿ ಆದೇಶಿಸಿದೆ.

1. ಶ್ರೀ ವಿ.ಅನಂತ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಆನೇಕಲ್, ಬೆಂಗಳೂರು ನಗರ ಜಿಲ್ಲೆ
2. ಶ್ರೀಮತಿ ಎನ್.ಯು ಪಾರ್ವತಿ, ಹಿಂದಿನ ಕಾರ್ಯದರ್ಶಿ, ನೆರಿಗಾ ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಪ್ರಸ್ತುತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕರ್ಪೂರ ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು.)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಪ್ರಭಾರ ಉಪ ನಿಬಂಧಕರು, ವಿಚಾರಣೆಗಳು-2, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ

**ಪ್ರತಿಗಳು ಮಾಹಿತಿಗಾಗಿ :**
1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಉಪಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.